MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.46 No:34 ENGLISH DAILY Subscription Yearly - Rs. - TUESDAY 31-8-2021

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## 1.2 ಮಿಲಿಯನ್ ಟನ್ GM ಸೋಯಾಮೀಲ್ ಆಮದಿಗೆ ಅನುಮತಿ

ಸೋಯಾಮೀಲ್ ದರ ಹೆಚ್ಚಳದ ಹಿನ್ನಲೆ ಫೀಡ್ ತಯಾರಕರ ಬೇಡಿಕೆಯ ಹಿನ್ನಲೆಯಲ್ಲಿ ಸರಕಾರ 1.2 ಮಿಲಿಯನ್ ಟನ್ ಜೆನೆಟಿಕ್ ಮೋಡಿಫೈಡ್ (**GM**) ಸೋಯಾಮೀಲ್ ಆಮದಿಗೆ ಅನುಮತಿ ನೀಡಿದೆಯೆನ್ನಲಾಗಿದೆ. ಅಕ್ಟೋಬರ್ 31 ರ ಮೊದಲು ಆಮದು ಮಾಡಬೇಕಾಗಿದೆ. ಕೋಳಿ ಫೀಡ್ಸ್ ಹಾಗೂ ಪಶು ಆಹಾರ ತಯಾರಕರಿಗೆ ಇದರಿಂದ ಸಹಾಯವಾಗಲಿದೆಯೆನ್ನಲಾಗಿದೆ.

## ರೊಬೆಸ್ಟಾ ಕಾಫಿ ದರಗಳು ಹಿಂದಿನ ನಾಲ್ಕು ವರ್ಷಗಳ ಗರಿಷ್ಠ ಮಟ್ಟಕ್ಕೆ

ರೊಬೆಸ್ಟಾ ಕಾಫಿ ದರ ಟನ್ ಗೆ $ 2024 ಏರಿಕೆಯಾಗಿದ್ದು. ಇದು ಹಿಂದಿನ ನಾಲ್ಕು ವರ್ಷಗಳ ಗರಿಷ್ಠ ಬೆಲೆಯಾಗಿದೆಯೆನ್ನಲಾಗಿದೆ. ಬ್ರೆಜಿಲ್ ನ ಪ್ರತಿಕೂಲ ಹವಾಮಾನ ಹಾಗೂ ವಿಯೆಟ್ನಾಂ ನ ಕೋವಿಡ್ 19 ನಿರ್ಬಂಧಗಳಿಂದ ಪೂರೈಕೆ ವ್ಯತ್ಯಯದಿಂದ ಹಾಗೂ ಉತ್ಪಾದನೆ ಇಳಿಕೆಯಾಗುವ ಸಂಭವದಿಂದ ದರ ಹೆಚ್ಚಳವಾಗಿದೆಯೆನ್ನಲಾಗಿದೆ. ಅರೆಬಿಕಾ ಕಾಫಿ ದರಗಳು ಹೆಚ್ಚಳವಾಗಿವೆ.